ಪ್ರಬಂಧ

# ಬೆಂಗಳೂರು ಜಾತ್ರೆ




**ಯೋಗೀಂದ್ರ ಮರವಂತೆ**

ಕಲೆ: ಮುರಳೀಧರ್ ರಾಥೋಡ್


ಇತ್ತೀಚೆಗೆ ನನ್ನ ಮೂವರು ಆಂಗ್ಲ ಸಹೋದ್ಯೋಗಿಗಳು ಇಲ್ಲಿಂದ ಐದು ಸಾವಿರ ಮೈಲಿ ದೂರದ ಬೆಂಗಳೂರಿನ ನಮ್ಮದೇ ಕಚೇರಿಯನ್ನು ಭೇಟಿ ಮಾಡಿದರು. ಇಷ್ಟು ದಿನ, ಈ ಕಾಲದ ದೂರಸಂಪರ್ಕ ಸಾಧನಗಳ ಮೂಲಕ ಸಂಬಂಧ ಬೆಳೆದಿದ್ದ ಬೆಂಗಳೂರು ಕಚೇರಿಯ ಸಹೋದ್ಯೋಗಿಗಳ ಜೊತೆಯ ಅವರ ಮೊದಲ ನೇರ ನೈಜ ಮುಖಾಮುಖಿ ಅದಾಗಿತ್ತು. ದೂರದಲ್ಲಿದ್ದೇ ಮನುಷ್ಯ ಮನುಷ್ಯರ, ವೃತ್ತಿ ಪ್ರವೃತ್ತಿಗಳ, ಬೇಕು ಬೇಡಗಳ ನಡುವೆ ಗಾಢ ಸಂಬಂಧ ಬೆಳೆಯಬಹುದಾದ ಕಾಲದಲ್ಲಿ ಇಂತಹ ಮುಖಾಮುಖಿ ಭೇಟಿಗಳು ಮುಂದೊಂದು ದಿನ ತೀರ ಅಪ್ರಸ್ತುತ, ಅನಗತ್ಯ ಅನಿಸಬಹುದು. ನಾವು ನಿತ್ಯ ಭೇಟಿಯಾಗುವ ಬಹುತೇಕ ವ್ಯಕ್ತಿ, ವಿಷಯ, ಯೋಚನೆ, ಸ್ಥಳ, ವಸ್ತುಗಳು ಎಲ್ಲವೂ ಅವಾಸ್ತವಿಕವೋ ಅಸತ್ಯವೋ ಆಗಿ ಕೃತಕವೇ ನೈಜ ಅನಿಸಬಹುದು. ಇರಲಿ, ಸದ್ಯಕ್ಕಂತೂ ನಿಜವಾಗಿ ನೋಡಿ, ನೇರವಾಗಿ ಮುಟ್ಟಿ ಕೈಕುಲುಕಿ ಅನುಭವ ಪಡೆಯುವುದು, ಮಾತುಕತೆ ವಿಚಾರ ವಿನಿಮಯ ಎದುರೆದುರೇ ನಡೆಯುವುದು ಇನ್ನೂ ಉಳಿದಿರುವ ಸಕಾಲ ಸುಕಾಲ. ಬಿಡಿ, ಇನ್ನು ಬೆಂಗಳೂರು ಕಚೇರಿಯ ಆ ಉದ್ಯೋಗಿಗಳು, ಇಷ್ಟು ದೂರದಿಂದ ನೋಡಿದರೆ ಬೆಂಗಳೂರನ್ನು ಪ್ರತಿನಿಧಿಸುವ ವ್ಯಕ್ತಿ ಸಂಕೇತಗಳೇ ಆದರೂ, ಅವರೂ ಅಲ್ಲಿಗೆ ಭಾರತದ ಬೇರೆ ಬೇರೆ ಊರುಗಳಿಂದ ಕೆಲಸ ಹುಡುಕಿ ಬಂದು ನೆಲೆಯಾದವರು. ಮುಂದೆ ಇನ್ನೆಲ್ಲಿಗೋ ಹೋಗುವವರು. ಆದರೂ ನನ್ನ ಆಂಗ್ಲ ಸಹೋದ್ಯೋಗಿಗಳ ಮಟ್ಟಿಗೆ ಅವರು ಭೇಟಿಯಾದ ಮೊದಲ ಬೆಂಗಳೂರಿಗರು ಎಂದರೆ ಅಲ್ಲಿನ ಕಚೇರಿಯ ಉದ್ಯೋಗಿಗಳೇ ಆಗಿದ್ದರು. ಇಂತಹ ಆಂಗ್ಲೋ-ಭಾರತೀಯ ಸೌಹಾರ್ದ ಸಮ್ಮಿಲನ ಸಮಾರಂಭದಲ್ಲಿ ನಿತ್ಯವೂ ವೃತ್ತಿ ಪ್ರವೃತ್ತಿಗಳ ಅದಲು ಬದಲಿನ ಜೊತೆ ಇಂಗ್ಲಿಷ್ ಮತ್ತು ಭಾರತೀಯ ಔಪಚಾರಿಕತೆ, ಉಪಚಾರ-ಮುಜುಗರ, ನಗೆ ತಮಾಷೆಗಳೂ ವಿನಿಮಯಗೊಳ್ಳುತ್ತಿದ್ದವು. ಇನ್ನು ಹಾಸ್ಯ ವ್ಯಂಗ್ಯಗಳು ಮಾತುಮಾತಿಗೆ ಹೊರಹೊಮ್ಮಿಸದಿದ್ದರೆ ಅಂತಹವರು ಆಂಗ್ಲರಾಗುವುದಕ್ಕೆ ಸಾಧ್ಯ ಇಲ್ಲ ಅಥವಾ ಯೋಗ್ಯ ಇಲ್ಲ. ಹಾಗಂತ ಇಂತಹ ಗಡಿಮೀರಿದ ಅಂತರರಾಷ್ಟ್ರೀಯ ಭೇಟಿಗಳಲ್ಲಿ ಎರಡೂ ಕಡೆಯವರು ಅನಿವಾರ್ಯವಾಗಿ ಇಂಗ್ಲಿಷ್‌ನಲ್ಲೇ ಸಂವಹನ ಮಾಡುತ್ತಿದ್ದರೂ ವಾಕ್ಯ